# ಸ್ವಾಮಿ ವಿವೇಕಾನಂದರ ಜೀವನ ಮತ್ತು ಸಂದೇಶಗಳಲ್ಲಿ ನಾನು ಮೆಚ್ಚುವ ಅಂಶಗಳು

ಪವನ್ ಆರ್. ನರಗುಂದೆ

ಕಳೆದ ವರ್ಷ ಏರ್ಪಡಿಸಲಾಗಿದ್ದ 'ವಿವೇಕಪ್ರಭ' ಪ್ರಬಂಧ ಸ್ಪರ್ಧೆಯಲ್ಲಿ ತೃತೀಯ ಸ್ಥಾನವನ್ನು ಪಡೆದ ಈ ಪ್ರಬಂಧವನ್ನು ಬರೆದಿರುವ ಪವನ್. ಆರ್. ನರಗುಂದೆ, ಗದಗಿನ ಕೆ. ಎಲ್.ಇ. ಸಂಸ್ಥೆಯ ಔಷಧಶಾಸ್ತ್ರ (Pharmacy) ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿದ್ದಾರೆ.

"ಎಲ್ಲ ನಕಾರಾತ್ಮಕ ಭಾವನೆಗಳನ್ನೂ ಕಿತ್ತೆಸೆದು ಎದ್ದು ನಿಲ್ಲಿ! ಭೋರ್ಗರೆಯುವ ಜಲಪಾತದಂತೆ ಜಗತ್ತಿನ ಮೇಲೆರಗಿರಿ —ಆ ರಭಸಕ್ಕೆ ಜಗತ್ತಿಗೆ ಜಗತ್ತೇ ಇಬ್ಭಾಗವಾಗಿಬಿಡಬೇಕು!"

"ವಿಧವೆಯ ಕಂಬನಿಯನ್ನೊರೆಸದ ಅಥವಾ ಅನಾಥನ ಹೊಟ್ಟೆಗೆ ಒಂದಿಷ್ಟು ರೊಟ್ಟಿಯನ್ನೊದಗಿಸದ ಧರ್ಮದಲ್ಲಾಗಲೀ, ದೇವರಲ್ಲಾಗಲಿ ನನಗೆ ನಂಬಿಕೆಯಿಲ್ಲ."

ಇಂತಹ ಅಗ್ನಿಸದೃಶ ವಾಕ್ಯಗಳನ್ನು ಘೋಷಿಸಿದ ಮಹಾತ್ಮ ಒಂದು 'ಯಶಸ್ವೀ ಜೀವನವನ್ನೇ' ನಡೆಸಿರಬೇಕು. ಆ ಆದರ್ಶಮಯ ವ್ಯಕ್ತಿಯೇ 'ಸ್ವಾಮಿ ವಿವೇಕಾನಂದರು' ಅವರ ಜೀವನ ಮತ್ತು ಸಂದೇಶಗಳಲ್ಲಿ ನಾನು ಮೆಚ್ಚುವ ಅಂಶಗಳು ಈ ಲೇಖನದಲ್ಲಿದೆ.




ಸ್ವಾಮಿ ವಿವೇಕಾನಂದರ ಬಾಲ್ಯದಿಂದಲೂ ಬೆಳೆದುಕೊಂಡು ಬಂದಿದ್ದ ಗುಣವೆಂದರೆ ನಿಃಸ್ವಾರ್ಥತೆ. ಒಮ್ಮೆ ಅವರ ಬಾಲ್ಯದಲ್ಲಿ ಒಬ್ಬ ಭಿಕ್ಷುಕ ಭಿಕ್ಷೆ ಬೇಡಿದಾಗ ನರೇಂದ್ರನಲ್ಲಿ (ಸ್ವಾಮೀಜಿಯವರ ಪೂರ್ವಾಶ್ರಮದ ಹೆಸರು) ಕೊಡಲು ಏನೂ ಇರಲಿಲ್ಲ. ಹೊಸ ಪಂಚೆಯೊಂದನ್ನು ಅಂದು ಅವರು ತೊಟ್ಟಿದ್ದರು. ಅದನ್ನೇ ಆ ಭಿಕ್ಷುಕನಿಗೆ ಬಿಚ್ಚಿಕೊಟ್ಟುಬಿಟ್ಟರು. ಆಹಾ, ಎಂಥಾ ನಿಃಸ್ವಾರ್ಥತೆ! ಈ **ನಿಃಸ್ವಾರ್ಥಭಾವವು** ನಾನು ಸ್ವಾಮಿಜಿಯವರ ಜೀವನದಲ್ಲಿ ಮೆಚ್ಚಿಕೊಂಡ ಮೊದಲ ಗುಣ. ಈ ಅನುಕಂಪೆಯ ಭಾವ ಅವರ ಜೀವನದುದ್ದಕ್ಕೂ ಇತ್ತು. ಮುಂದೆ ಅವರೇ ಒಂದು ಪತ್ರದಲ್ಲಿ ಬರೆಯುತ್ತಾರೆ, "ನನ್ನ ಒಂದು ದೋಷವೆಂದರೆ, ನನಗೆ ಎಷ್ಟೇ ಕಷ್ಟವಿದ್ದರೂ ಮತ್ತೊಬ್ಬರ ಕಷ್ಟ ನಿವಾರಣೆಗೆ ನಾನು ಧಾವಿಸುವೆನು.."

ಸ್ವಾಮಿಜಿಯವರಿಗೆ ತಮ್ಮಲ್ಲಿ ಅಗಾಧ ಶ್ರದ್ಧೆಯಿತ್ತು. ಅವರೆಂದಿಗೂ ಜೀವನದಲ್ಲಿ ಎದೆಗುಂದಲಿಲ್ಲ. ಆದುದರಿಂದಲೆ, ಅವರು ತಮ್ಮ ಜೀವನದಲ್ಲಿ ಎಷ್ಟೇ ದೊಡ್ಡ ಕಷ್ಟದಲ್ಲಿ ಸಿಲುಕಿದರೂ ಅದನ್ನು **ಆತ್ಮವಿಶ್ವಾಸದ** ಬಲದಿಂದ ಎದುರಿಸುತ್ತಿದ್ದರು. ನಂತರದ ದಿನಗಳಲ್ಲಿ ಅವರೇ ಹೇಳುತ್ತಿದ್ದರು, "ಯೌವನದಲ್ಲಿ ನನಗೆ ನನ್ನಲ್ಲಿ ಬಹಳ ಶ್ರದ್ಧೆಯಿತ್ತು, ಅಂತಹ ಶ್ರದ್ಧೆಯನ್ನೇ ನೀವು ಬೆಳೆಸಿಕೊಳ್ಳಬೇಕು."

ಸ್ವಾಮಿಜಿಯವರ ಜೀವನದಲ್ಲಿ ನಾನು ಮೆಚ್ಚುವ ಇನ್ನೊಂದು ಅಂಶವೆಂದರೆ, ಅವರ 'ದೇಶಪ್ರೇಮ'. ಈ ದೇಶಪ್ರೇಮಕ್ಕೆ ಹೋಲಿಕೆಯೆಂಬುದೇ ಇಲ್ಲ ಎಂದರೆ ಅತಿಶಯೋಕ್ತಿಯಲ್ಲ. ಅವರು ಎಲ್ಲೇ ಇದ್ದರೂ, ಎಂತಹ ಸುಖ-ಸುಪ್ಪತ್ತಿಗೆಯಲ್ಲಿದ್ದರೂ ಭಾರತದ ಸ್ಥಿತಿಗತಿಗಳನ್ನು ನೆನೆದು ಮರುಗುತ್ತಿದ್ದರು. ರಾತ್ರಿಯೆಲ್ಲ ಅತ್ತು ಅತ್ತು ಹಾಸಿಗೆ ತಲೆದಿಂಬುಗಳನ್ನೇ ಒದ್ದೆಯಾಗಿಸುವ ಸ್ಥಿತಿ ಬಂದೊದಗುತ್ತಿತ್ತು. ಸ್ವಾಮಿಜಿಯವರ ಜೀವನದಲ್ಲಿ ನಾನು ತುಂಬಾ ಮೆಚ್ಚಿಕೊಂಡ ಗುಣವೇ ಈ ದೇಶಪ್ರೇಮ.

ಸ್ವಾಮಿಜಿಯವರ ಜೀವನದಲ್ಲಿ ನಾನು ಮೆಚ್ಚುವ ಮತ್ತೊಂದು ಗುಣವೆಂದರೆ ಅವರ ಸಂಘಟನಾ ಸಾಮರ್ಥ್ಯ. ಇದು ಅವರಲ್ಲಿ ಶಿಶುಸಹಜವಾಗಿ ಬೆಳೆದುಬಂದಿತ್ತು. ಅವರು ಎಲ್ಲೇ ಹೋದರೂ ಒಂದು ಸಂಘಟನೆಯನ್ನು ಮಾಡಿ ಅದನ್ನು ಕಾರ್ಯೋನ್ಮುಖಗೊಳಿಸುತ್ತಿದ್ದರು. ಅವರು ವಿದೇಶದಲ್ಲಿದ್ದರೂ ಸಹ ತಮ್ಮ ಚೈತನ್ಯಯುತ ಪತ್ರಗಳಿಂದ ತಮ್ಮ ಶಿಷ್ಯರನ್ನು, ಗುರುಭಾಯಿಗಳಿಗೆ ದಿಗ್ದರ್ಶನ ಮಾಡಿ ಕಾರ್ಯೋನ್ಮುಖಗೊಳಿಸುತ್ತಿದ್ದರು.

"ಮಾನವನಲ್ಲಿ ಸುಪ್ತವಾಗಿರುವ ದೈವತ್ವವನ್ನು ಪ್ರಕಟಗೊಳಿಸುವುದೇ ಶಿಕ್ಷಣ". ಸ್ವಾಮಿಜಿಯವರ ಶಿಕ್ಷಣದ ಬಗೆಗಿನ ಈ ಹೇಳಿಕೆ ನನ್ನನ್ನು ದೈವತ್ವದ ಕಡೆಗೆ ಕೈಮಾಡಿ ಕರೆದಂತಿದೆ. ನಿಜವಾದ ಶಿಕ್ಷಣವೆಂದರೆ ಇದು. ಈಗಿನ ಶಿಕ್ಷಣ ಕೇವಲ ಯಾಂತ್ರಿಕ. ಅದಕ್ಕೆ ಸ್ವಾಮಿಜಿಯವರು ಹೇಳುತ್ತಿದ್ದರು, "ನೀವು ಆಧ್ಯಾತ್ಮಿಕರಾಗದೆಯೆ ಭಾರತದ ಪುನರುತ್ಥಾನ ಸಾಧ್ಯವಿಲ್ಲ."

"ಅಪಜಯಕ್ಕೆ ಅಂಜಿ ನಾನು ಹೋರಾಟದಿಂದ ಹಿಂಜರಿಯಲೆ?" ಸ್ವಾಮಿಜಿಯವರ ಈ ಮಾತು ನನ್ನನ್ನು ಸದಾ ಹುರಿದುಂಬಿಸುವ ಮಾತು, ಅಪಜಯದ ಭಯವನ್ನು ಓಡಿಸಿದಂತಹ ವಾಕ್ಯಪುಂಜ. ನಾನು ಸೋತಾಗಲೊಮ್ಮೆ ನನ್ನ ಕೈಹಿಡಿದು ಮೇಲಕ್ಕೆತ್ತಿ ಕಾರ್ಯೋನ್ಮುಖನನ್ನಾಗಿಸಿದೆ. "ಪ್ರಯತ್ನ ಬಿಡದ ಛಲಗಾರನೇ ಕೊನೆಗೆ ಜಯಶಾಲಿಯಾಗುವನು." ಈ ಮಾತು ನನ್ನನ್ನು ಸದಾ ಪ್ರಯತ್ನಶೀಲನನ್ನಾಗಿಸಿದೆ, ಛಲವಂತನನ್ನಾಗಿಸಿದೆ.

"ನಿನ್ನಲ್ಲಿ ನಿಜವಾದ ಅಂತಸ್ಸತ್ವವಿದ್ದರೆ ಪರಿಸ್ಥಿತಿ ಎಷ್ಟು ಪ್ರತಿ

ಕೊಲೆವಾದರೂ ನಿನ್ನ ಅಂತಸ್ಸತ್ವ ಪುಟಿದೇಳುವುದು ಖಂಡಿತ." ಓಹ್! ಎಂತಹ ಸ್ಫೂರ್ತಿಯುತ ವಾಕ್ಯ. ಪ್ರತಿಯೊಬ್ಬರೂ ಆಲಿಸಲೇಬೇಕಾದ ಮಹತ್ತಾದ ಸತ್ಯ. ಒಬ್ಬ ಹೇಡಿಯೂ ಕೂಡ ಈ ಮಾತು ಕೇಳಿದ ಮೇಲೆ ಮೈ ಕೊಡವಿಕೊಂಡು ಎದ್ದುನಿಂತು ಪ್ರಯತ್ನ ಮಾಡದೆ ಇರಲಾರ. ಸ್ವಾಮಿಜಿಯ ಸಮಸ್ತ ಸಂದೇಶಗಳಲ್ಲಿ ನಾನು ಮೊದಲು ಪ್ರಾಧಾನ್ಯತೆ ಕೊಡುವ ಸಂದೇಶವೆಂದರೆ ಇದೇ.

ಸ್ವಾಮಿಜಿಯವರು ಯಾವಾಗಲೂ ಅಶಕ್ತಿಯನ್ನು, ನಕಾರಾತ್ಮಕ ಭಾವನೆಗಳನ್ನು ಸಹಿಸುತ್ತಿರಲಿಲ್ಲ. ಅವರು ಯಾವಾಗಲೂ ಎಲ್ಲರಿಗೂ ಶಕ್ತಿಶಾಲಿಗಳಾಗಲು ಕರೆ ನೀಡುತ್ತಿದ್ದರು. ಇದನ್ನು ನಾನು ಸರ್ವಥಾ ಮೆಚ್ಚುವೆನು. ಅವರೇ ಹೇಳುತ್ತಿದ್ದರು, "ಶಕ್ತಿಯೇ ಜೀವನ, ದೌರ್ಬಲ್ಯವೇ ಮರಣ."

"ದೇವರನ್ನು ಎಲ್ಲಿ ಹುಡುಕುತ್ತಿರುವಿರಿ? ಏಕೆ? ಬಡವರು, ದೀನರು, ದರಿದ್ರರು ಇವರು ಪ್ರತ್ಯಕ್ಷ ದೇವರಲ್ಲವೆ?" ಸ್ವಾಮಿಜಿಯವರಿಗೆ ದೀನರ, ದರಿದ್ರರ ಬಗೆಗೆ ಇದ್ದ ಕಾಳಜಿಯನ್ನು ಈ ಮಾತು ಎತ್ತಿ ತೋರಿಸುತ್ತದೆ. ದೀನರ, ದರಿದ್ರರ ಸೇವೆಯನ್ನು ಮಾಡಲು ಎಲ್ಲರನ್ನೂ ಹುರಿದುಂಬಿಸುತ್ತದೆ.

ಸ್ವಾಮಿಜಿಯವರು ಎಂದೂ ಯಾವುದಕ್ಕೂ ಭೀತಗೊಂಡವರಲ್ಲ. ಅವರು ಯಾವಾಗಲೂ ನಿರ್ಭೀತರಾಗಿದ್ದು ಉಳಿದವರಿಗೂ ನಿರ್ಭೀತಿಯ ಸಂದೇಶವನ್ನು ನೀಡುತ್ತಿದ್ದರು. ಅವರಿಗೆ ಹೇಡಿಗಳು, ಭೀತಿಯುಳ್ಳವರನ್ನು ಕಂಡರೆ ಆಗುತ್ತಿರಲಿಲ್ಲ. ಅವರ ಸಂದೇಶವೆಲ್ಲಾ ಶಕ್ತಿ, ನಿರ್ಭೀತಿ, ನಿಸ್ವಾರ್ಥತೆ, ದೇಶಪ್ರೇಮ, ಸಹನೆ ಇದರಿಂದಲೇ ತುಂಬಿರುತ್ತಿದ್ದವು. ಅವರು ಹೇಳುತ್ತಿದ್ದರು, "ಎಂದು ನೀನು ಹೆದರುವೆಯೋ ಆಗ ನೀನು ಯಾರೂ ಅಲ್ಲ, ನೀನು ಬರಿ ಶೂನ್ಯ." ಅವರ ಜೀವನ ಯಾವಾಗಲೂ ಧೀರತೆಯನ್ನೇ ಮೆರೆಯುತ್ತಿತ್ತು.

# ಕನಸಿನ ಗುರಿಮುಟ್ಟುವ ತನಕ ಹೋರಾಡೋಣ

ಶಿವನಕೆರೆ ಬಸವಲಿಂಗಪ್ಪ

[ಅಸಾಧ್ಯವಾದುದನ್ನು ಸಾಧಿಸಿರುವ ಕೆಲವು ಮಹನೀಯರ ಪರಿಚಯವನ್ನು ಮಾಡಿಕೊಟ್ಟಿರುವ ಲೇಖಕರು ದಾವಣಗೆರೆಯ ನಿವಾಸಿಗಳು. ಯುವಜನಾಂಗ ಇಂತಹ ವ್ಯಕ್ತಿಗಳ ಅಧ್ಯಯನದಿಂದ ಸ್ಫೂರ್ತಿ ಪಡೆಯಲಿ]

ವಿಲಿಯಂ ಮರ್ಫಿ "ಒಂದು ವೇಳೆ ವಿಧಿ ನಮ್ಮನ್ನು ಸೋಲಿಸುವ ಹಾಗಿದ್ದರೆ, ಅದು ನಮ್ಮನ್ನು ಎದೆಗುಂದುವಂತೆ ಮಾಡಿದರೆ, ಅದಕ್ಕೆ ಸರಿಯಾದ ಹೋರಾಟ ಯೋಜಿಸಿಕೊಂಡು ವಿಧಿಯನ್ನು ಸೋಲಿಸುವರೆಗೂ ಹೋರಾಡೋಣ" ಎನ್ನುತ್ತಾರೆ. ಅಂತಹ ಸಕಾರಾತ್ಮಕ ಮನೋಭಾವವನ್ನು ಪ್ರಪಂಚದ ಶ್ರೇಷ್ಠ ಸಾಧಕರು ತಮ್ಮ ಸಹಜೀವಿಗಳಿಗೆ ಉದಾಹರಣೆಯಾಗಿ ಕೊಟ್ಟಿದ್ದಾರೆ.

"ಸಣ್ಣ ಗುರಿ ಅಪರಾಧ. ಕಾಲ ಜಾರಿ ಹೋಗುತ್ತಿದೆ" ಎನ್ನುವ ಹಾಡನ್ನು ಭಾರತದ ಶ್ರೇಷ್ಠ ಸಂಗೀತ ನಿರ್ದೇಶಕ ಎ.ಆರ್. ರೆಹಮಾನ್ ಮಕ್ಕಳ ದಿನಾಚರಣೆಗಾಗಿ ಸಂಯೋಜಿಸಿದ್ದರು. ಅಂದು ಅವರು ವಿಜ್ಞಾನಿ ರಾಷ್ಟ್ರಪತಿ ಎ.ಪಿ.ಜೆ. ಅಬ್ದುಲ್ ಕಲಾಂರೊಂದಿಗೆ ವೇದಿಕೆಯ ಮೇಲಿದ್ದರು. ಅವರು ಕಲಾಂರ ಪುಸ್ತಕ 'ಉಜ್ವಲ ಮನಸ್ಸುಗಳು' (ಇಗ್ನೈಟೆಡ್ ಮೈಂಡ್ಸ್) ಎಂಬ ಪುಸ್ತಕದಲ್ಲಿರುವ "ಯುವ ಮನಸ್ಸಿನ ಹಾಡು"ವಿನ ಸ್ಫೂರ್ತಿಯಿಂದ ಮೇಲಿನ ಗೀತೆಯನ್ನು ರಚಿಸಿದ್ದಾರೆ.

ಭಾರತದ ಬಹು ದೊಡ್ಡ ವಿಜ್ಞಾನಿ, ಈ ದೇಶಕ್ಕೆ 'ವಿಷನ್–೨೦೨೦' ಎಂಬ ವಿಶೇಷ ಗುರಿಗನಸನ್ನು ನೀಡಿರುವ ಅಬ್ದುಲ್ ಕಲಾಂ ತಮಿಳುನಾಡಿನ ರಾಮೇಶ್ವರದ ಬೀದಿಗಳಲ್ಲಿ ವೃತ್ತಪತ್ರಿಕೆಗಳನ್ನು ಮಾರುತ್ತಿದ್ದರು. ತಮ್ಮ ವಿದ್ಯಾಭ್ಯಾಸದ ಖರ್ಚಿಗೆ ತಮ್ಮ ಸಹೋದರಿಯ ಒಡವೆಗಳನ್ನು ಮಾರಬೇಕಾಗಿ ಬಂದ ಇವರು ಮುಂದೆ ಭಾರತದ ವಿಜ್ಞಾನಿ ಸಮುದಾಯದ ಅತ್ಯುನ್ನತ ಪದವಿಗೆ ಏರಿದರು. ಅನಂತರ ಭಾರತದ ಬಾಹ್ಯಾಕಾಶ ಮತ್ತು ಕ್ಷಿಪಣಿ ಕಾರ್ಯಗಳ ನೇತೃತ್ವ ವಹಿಸಿಕೊಂಡು ರಕ್ಷಣಾ ಇಲಾಖೆಯ ಸಂಶೋಧನೆ ಮತ್ತು ಅಭಿವೃದ್ಧಿ ನಿರ್ದೇಶಕರಾಗಿ, ಭಾರತದ ಪ್ರಧಾನ ಮಂತ್ರಿಯವರಿಗೆ ವೈಜ್ಞಾನಿಕ ಸಲಹೆಗಾರರಾಗಿ, ಅತ್ಯುನ್ನತ ನಾಗರಿಕ ಪ್ರಶಸ್ತಿಯಾದ 'ಭಾರತ ರತ್ನ' ಪದವಿಯನ್ನೂ ಪಡೆದರು. ಅವರ ಮನಸ್ಸು ಕೇವಲ ಮಿಲಿಟರಿ ತಾಂತ್ರಿಕ ಅಭಿವೃದ್ಧಿಯನ್ನಲ್ಲದೆ ಕೋಟ್ಯಂತರ ಬಡವರ ಅಭಿವೃದ್ಧಿಯ ಬಗೆಗೂ ಸದಾ ಚಿಂತಿಸುತ್ತಿತ್ತು. ಅವರ ಕನಸುಗಳು ಅವರನ್ನು ಈ ಇಳಿ ವಯಸ್ಸಿನಲ್ಲೂ ಜೀವಂತಿಕೆಯಿಂದ ಪುಟಿಯುವ ಸ್ಫೂರ್ತಿಯ ಸೆಲೆಯನ್ನಾಗಿಸಿವೆ.



ಡಾ. ಅಬ್ದುಲ್ ಕಲಾಂ

ಇನ್ನೊಬ್ಬ ಇಂತಹ ಮಹಾನ್ ಸಾಧಕರು ನಮ್ಮ ಮಾಜಿ ರಾಷ್ಟ್ರಪತಿ, ಕೇರಳದ ದಲಿತ ವರ್ಗದಿಂದ ಬಂದ ಶ್ರೀ ಕೆ.ಆರ್. ನಾರಾಯಣನ್. ಈ



ಕೆ.ಆರ್.ನಾರಾಯಣನ್